
ಬಹಳ ಹಿಂದಿನ ಕಾಲದಿಂದಲೂ ಬ್ಯಾರಿ ಸಮುದಾಯದ ಬಹುತೇಕರು ಸುನ್ನತಿಯನ್ನು ಸಣ್ಣ ಮಟ್ಟದ ಮದುವೆಯೆಂದೇ ಕರೆದು ಆಚರಿಸುತ್ತಾರೆ. ಇಸ್ಲಾಮಿನಲ್ಲಿ ಅದು ಕಡ್ಡಾಯ. ಆದರೆ, ಬ್ಯಾರಿಗಳಲ್ಲಿ ಕಡ್ಡಾಯದ ಜೊತೆಗೆ ಅದೊಂದು ಶ್ರೀಮಂತವಾದ ರಿಚುವಲ್. 'ಸುನ್ನತ್ ಮಜ್ಲಿ' (ಸುನ್ನತಿ ಮದುವೆ) ಎಂಬ ನುಡಿಗಟ್ಟು ಬ್ಯಾರಿ ಸಂಪ್ರದಾಯದಲ್ಲಿ ಈಗಲೂ ಇದೆ. ಸುನ್ನತಿಯಾದ ಹುಡುಗನನ್ನು ಮದುಮಗನೆಂದೇ ಸಂಬೋಧಿಸಿ ತಮಾಷೆ ಮಾಡುತ್ತಾರೆ. ದಾವತಿಗೆ (ಕಾರ್ಯಕ್ರಮಕ್ಕೆ) ಬರುವ ಮಹಿಳೆಯರು 'ಮದುಮಗ, ಮದುಮಗ' ಎಂದು ಕರೆದು ಕಿಚಾಯಿಸುವುದು ಕೂಡ ಈ ಸಂಭ್ರಮದ ಭಾಗವಾಗಿಬಿಟ್ಟಿದೆ. ಉಳ್ಳವರ ಮನೆಯ ಮದುಮಗನನ್ನು ದಫ್‌ನಲ್ಲಿ ಹಾಡುತ್ತಾ ಕುಣಿಯುತ್ತಾ ಮಸೀದಿಗೆ ಕರೆದೊಯ್ಯುವುದು ಇನ್ನೊಂದು ಸಂಭ್ರಮ; ಅದನ್ನು ನೋಡಲು ಸಾಲುಗಟ್ಟಿ ರಸ್ತೆಯ ಇಕ್ಕೆಲಗಳಲ್ಲಿ ನಿಲ್ಲುತ್ತಿದ್ದ ಮಹಿಳೆಯರ ಮಾತುಕತೆಗಳನ್ನು ಕೇಳಿಸಿಕೊಳ್ಳುವುದೇ ಮತ್ತೊಂದು ಸಂಭ್ರಮ. ಬಡವರ ಮಕ್ಕಳು ದಫ್‌ನಲ್ಲಿ ಹೋಗುವ ಆಸೆಯನ್ನು ಅದುಮಿ, ಹೊಸ ವಸ್ತ್ರದಲ್ಲಿ ಕಂಗೊಳಿಸಿದರೂ ಸದ್ದುಗದ್ದಲವಿಲ್ಲದೆ ಮಸೀದಿಗೆ ಹೋಗಿ ಶುಕ್ರವಾರದ ಪ್ರಾರ್ಥನೆ ಮುಗಿಸಿ ಬರುತ್ತಾರೆ.

ನಮ್ಮ ಬಾಲ್ಯದಲ್ಲಿ ಸುನ್ನತಿಯಾದ ನಂತರ ಶುಕ್ರವಾರದ ಪ್ರಾರ್ಥನೆಗೆ ಮಸೀದಿಗೆ ಹೋಗಲೇಬೇಕು. ಅದೊಂಥರ ಮಕ್ಕಳಿಗೆ ಮಸೀದಿಗೆ ಹೋಗಲು ಲೈಸೆನ್ಸ್ ಸಿಕ್ಕಿದಂತೆ. ಅದರ ಮೊದಲು ಹೋದರೂ ಹೋಗದಿದ್ದರೂ ಯಾರೂ ಕೇಳುವವರಿಲ್ಲ. ಸುನ್ನತಿಯಾಗುವ ಮೊದಲು ಚಿಕ್ಕ ಮಕ್ಕಳನ್ನು ಮಸೀದಿಗೆ ಕರೆದುಕೊಂಡು ಹೋಗಿ ಆ ಮಕ್ಕಳು ಅಲ್ಲಿ ಆಟವಾಡುತ್ತಾ ಗಲಾಟೆ ಎಬ್ಬಿಸಿದರೆ, ವಯಸ್ಕರಿಗೆ ಸಿಟ್ಟು ಬಂದು 'ಸುನ್ನತಿಯಾಗದ ಮಕ್ಕಳನ್ನೆಲ್ಲಾ ಮಸೀದಿಗೆ ಕರೆದು ತರುತ್ತಾರೆ' ಎಂದು ಮೂಗು ಮುರಿಯುತ್ತಿದ್ದುದೂ ಇತ್ತು. ಹಿರಿಯರಿಗೆ ಮಕ್ಕಳು ಸುನ್ನತಿಯಾಗದೆ ಮಸೀದಿಗೆ ಬಂದುದಕ್ಕೆ ಸಿಟ್ಟೋ ಅಥವಾ ಮಸೀದಿಯಲ್ಲಿ ಗಲಾಟೆಯೆಬ್ಬಿಸಿದ್ದಕ್ಕೆ ಸಿಟ್ಟೋ ಎಂದು ನಮಗೆ ಅರ್ಥವಾಗುತ್ತಿರಲಿಲ್ಲ. ಈಗಿನ ಮಕ್ಕಳಿಗೆ ತೀರಾ ಸಣ್ಣ ವಯಸಿನಲ್ಲೇ ಸುನ್ನತಿಯಾಗುವುದರಿಂದ ಆ ಸಮಸ್ಯೆಯಿಲ್ಲ.

ಚಿಕ್ಕಮ್ಮನ ಮೊಮ್ಮಗನ ಸುನ್ನತಿಯ ಹುಣ್ಣು ಒಣಗಿ ಮಸೀದಿಗೆ ಹೋಗುವ ಕಾರ್ಯಕ್ರಮದಿಂದ ಹಿಂದಿರುಗುವಾಗ ಅವನ ತಂದೆಯ ಸಂಬಂಧಿಕರಲ್ಲಿ ಯಾರೋ ಒಬ್ಬರು ಅವನಿಗೆ ಹಣ ಕೊಡುತ್ತಿರುವುದು ನನ್ನ ಕಣ್ಣಿಗೆ ಬಿದ್ದ ಕ್ಷಣ ನನ್ನ ಸ್ಮೃತಿಪಟಲದ ಬಿಗ್ ಸ್ಕ್ರೀನಿನಲ್ಲಿ ಇಪ್ಪತ್ತೆರಡು ವರ್ಷಗಳ ಹಿಂದಿನ ನೆನಪಿನ ರೀಲು ತಿರುಗಲಾರಂಭಿಸಿತು. ಈಗಿನಂತೆ ಆಗ ಹುಟ್ಟಿದಾಗಲೇ ಸುನ್ನತಿ ಮಾಡುವ ಕಲ್ಪನೆ ಇರಲಿಲ್ಲ. ಅಂತಹ ವ್ಯವಸ್ಥೆ ಇತ್ತೋ ತಿಳಿದಿಲ್ಲ. ಆಗ ನಾಲ್ಕೋ ಐದೋ ವರ್ಷ ಕಳೆದ ಮೇಲೆಯೇ ಬಹುತೇಕ ಹುಡುಗರಿಗೆ ಸುನ್ನತಿಯಾಗುತ್ತಿತ್ತು. ನಮ್ಮ ಊರಿನ ಕೆಲವು ಹುಡುಗರಿಗೆ ಏಳು ಎಂಟು ವರ್ಷಗಳಾದ ಮೇಲೆ ಸುನ್ನತಿ ಆದದ್ದೂ ಇದೆ. ಅದರಾಚೆಗೆ ಹೋಗುವುದು ಕಡಿಮೆ. ಐದಾರು ವರ್ಷದವರೆಗೂ ಯಾರಾದರು ಹುಡುಗರು ಸುನ್ನತಿಯಾಗದೆ ಉಳಿದಿರುವುದು ಕಂಡರೆ ಆ ಮನೆಯವರಿಗೆ ಊರ ಹಿರಿಯರು ಬಂದು ಕಥೆ ಹೇಳುತ್ತಿದ್ದರು. ನನ್ನ ಬಾಲ್ಯದಲ್ಲಿ ಹಿರಿಯರು ಹೇಳುತ್ತಿದ್ದ ಕಥೆಗಳಲ್ಲಿ ಒಂದು ಕಥೆ ಹೀಗಿದೆ: ಹತ್ತು ವರ್ಷದವರೆಗೆ ಸುನ್ನತಿ ಆಗದೆ ಉಳಿದಿದ್ದ ಹುಡುಗನೊಬ್ಬನಿಗೆ ಸುನ್ನತಿ ಮಾಡುವ ದಿನವನ್ನು ನಿಗದಿ ಮಾಡಲಾಯಿತಂತೆ. ಆದರೆ, ಆ ಹುಡುಗ ಸುನ್ನತಿ ಮಾಡುವ ಉಸ್ತಾದರ ಮುಂದೆ ಬೆತ್ತಲಾಗಿ ಕುಳಿತುಕೊಳ್ಳುವ ಮುಜುಗರದಿಂದ ಊರು ಬಿಟ್ಟು ಓಡಿಹೋದನಂತೆ! ನಂತರ ಆತ ಮನೆಗೆ ಬಂದದ್ದು ಹತ್ತು ವರ್ಷಗಳ ಬಳಿಕ. ಬೆಂಗಳೂರೋ ಮುಂಬೈಯೋ ಎಲ್ಲೆಲ್ಲೋ ತಿರುಗಿ ಸಾಕಾಗಿ ಊರಿಗೆ ಬಂದಿದ್ದನಂತೆ! ಆಗ ಅವನಿಗೆ ಸುನ್ನತಿಯಾಗಿತ್ತೆಂದು ಹಿರಿಯರು ಹೇಳುತ್ತಿದ್ದರು. ಹೇಗೆ ನಿನಗೆ ಸುನ್ನತಿಯಾಯಿತೆಂದು ಅವನೊಂದಿಗೆ ಕೇಳಿದಾಗ, ಯಾರೋ ಮಹಾತ್ಮರೊಬ್ಬರು ಕನಸಿನಲ್ಲಿ ಬಂದು ಅವನ ಸುನ್ನತಿ ಮಾಡಿದ್ದರಂತೆ!



ಆಗ ನಮಗೆ ಸುನ್ನತಿ ಎಂದರೆ ಭಯಮಿಶ್ರಿತ ಸಂಭ್ರಮ. ನನ್ನ ಓರಗೆಯ ಗೆಳೆಯರೆಲ್ಲರಿಗೂ ನನಗಿಂತಲೂ ಮೊದಲೇ ಸುನ್ನತಿಯಾಗಿತ್ತು. ಅವರು ಹೊಸ ಬಟ್ಟೆ ಧರಿಸಿ, ಸಂಬಂಧಿಕರ ನಡುವೆ ಮಿರಿ ಮಿರಿ ಮಿನುಗುವ ಕಪ್ಪು ಬಣ್ಣದ ಶೂ ಧರಿಸಿ ಗತ್ತಿನಿಂದ ನಡೆಯುತ್ತಾ ಮಸೀದಿಗೆ ಹೋಗುತ್ತಿದ್ದುದನ್ನು ಮಾತ್ರ ಕಂಡಿದ್ದ ನನಗೆ ಸುನ್ನತಿಯ ಬಗ್ಗೆ ವಿಪರೀತ ಕುತೂಹಲವಿತ್ತು. ಆಗ ತೀರಾ ಬಡತನದಲ್ಲಿದ್ದ ನನ್ನ ಕಣ್ಣ ಮುಂದೆ ಹೊಸ ಬಟ್ಟೆ, ತುಪ್ಪದನ್ನ, ಪತ್ತಿರಿ, ಕೋಳಿ ಸಾರು ಮೊದಲಾದವುಗಳೇ ಕುಣಿಯುತ್ತಿದ್ದರೂ, ನನ್ನ ಮನಸು ಮಾತ್ರ ನನ್ನ ಓರಗೆಯ ಗೆಳೆಯರು ಲೆಕ್ಕ ಒಪ್ಪಿಸುತ್ತಿದ್ದ ಹಣದ ಮೇಲಿರುತ್ತಿತ್ತು. ಸುನ್ನತಿಯಾದವರನ್ನು ನೋಡಲು ಬರುತ್ತಿದ್ದವರು ಹಣ ಕೊಡುವ ಸಂಪ್ರದಾಯವಿತ್ತು. ಆಗ ಈ ಸಂಪ್ರದಾಯ ಎಷ್ಟು ವಿಪರೀತವಾಗಿತ್ತೆಂದರೆ, ಅದು ಕಡ್ಡಾಯವೇನೋ ಎಂಬಂತೆ ಸಣ್ಣ ಮಕ್ಕಳು ಸಹ ಹರಕೆ ಡಬ್ಬಿಗೆ ಚಿಲ್ಲರೆ ಹಾಕುವ ಗಾಂಭೀರ್ಯದಲ್ಲೇ ಸುನ್ನತಿಯಾಗಿ ಮಲಗಿದವರ ಕೈಗೆ ನೋಟುಗಳನ್ನೋ ಪಾವಲಿಗಳನ್ನೋ ಹಾಕಿ ಚಪ್ಪಾಳೆ ತಟ್ಟಿ ಕುಣಿಯುತ್ತಿದ್ದರು. ನಾವು ಅವುಗಳನ್ನು ಎಣಿಸುತ್ತಾ, ಜೋಪಾನ ಮಾಡುತ್ತಾ ಎಂದಿನಂತೆ ಅಂಗಳಕ್ಕಿಳಿದು ಆಟವಾಡಲಾಗದ ದುಃಖವನ್ನು ಮರೆತು ಮಲಗಿದಲ್ಲಿಂದಲೇ ಖುಷಿಪಡುತ್ತಿದ್ದೆವು.

ಓರಗೆಯ ಗೆಳೆಯರಿಗೆ ಸುನ್ನತಿಯಾದ ವಿಷಯ ತಿಳಿಯುತ್ತಿದ್ದಂತೆ 'ನನಗೆಂದು ಸುನ್ನತಿ' ಎಂದು ಅಮ್ಮನೊಂದಿಗೆ ಕೇಳುತ್ತಿದ್ದೆ.

'ಸುನ್ನತಿ ಎಂದರೇನೋ?' ಎಂದು ಅಮ್ಮ ಕೇಳಿದ್ದರು.

ಅರೆಬರೆಯಷ್ಟೇ ತಿಳಿದಿದ್ದ ನಾನು ನಾಚಿಕೆಯಿಂದ ಏನೂ ಹೇಳಲು ತಿಳಿಯದೆ, 'ಸುನ್ನತ್' ಎಂದಷ್ಟೇ ಹೇಳಿ ನಗುತ್ತಿದ್ದೆ. ಅಮ್ಮ ಮತ್ತೇನು ಹೇಳುತ್ತಿದ್ದರೋ ನೆನಪಿಲ್ಲ.

ಅದೊಂದು ದಿನ ಮನೆಯ ಹಿರಿಯರು ನನ್ನ ಸುನ್ನತಿಯ ಬಗ್ಗೆ ಮಾತನಾಡುತ್ತಿದ್ದರು. 'ಏಳು ಕತ್ತೆಯ ವಯಸಾಗ್ತಾ ಬಂತು, ಇನ್ನೂ ಅವನಿಗೆ ಸುನ್ನತಿ ಮಾಡುವ ಆಲೋಚನೆ ಇಲ್ವಾ?' ಎಂದು ಚಿಕ್ಕಪ್ಪ ಗದರಿಸುತ್ತಿದ್ದರು. ನಾನು ಮದುವೆ ಹೆಣ್ಣಿನಂತೆ ಇವೆಲ್ಲವನ್ನೂ ಕದ್ದು ಕೇಳಿ, ಓರಗೆಯ ಗೆಳೆಯರೊಂದಿಗೆ ಹೇಳಿ ಸಂಭ್ರಮಿಸುತ್ತಿದ್ದೆ. ಮರುದಿನ ಅಮ್ಮ ಬೆಳಿಗ್ಗೆ ಬೇಗನೇ ಎಬ್ಬಿಸಿ, ನನ್ನನ್ನು ಸಿದ್ಧಪಡಿಸಿದರು. ಎಲ್ಲಿಗೆಂದು ನನಗೆ ತಿಳಿದಿರಲಿಲ್ಲ. ಮನೆಯ ಮುಂದೆ ಸೀಟರ್ ಬಸ್ ಬಂದು ನಿಂತಿತ್ತು. ಅದರಲ್ಲಿ ನನ್ನ ಬಂಧುಬಳಗಕ್ಕೆ ಸೇರಿದ ಅನೇಕ ಮಕ್ಕಳಿದ್ದರು. ಎಲ್ಲಿಗೋ ಪಿಕ್‌ನಿಕ್ ಹೊರಟಿರಬೇಕೆಂದು ನನಗೆ ಖುಷಿಯಾಯಿತು. ಅವಸರದಲ್ಲಿ ಹಲ್ಲುಜ್ಜಿ, ಲಗುಬಗೆಯಿಂದ ಬಟ್ಟೆ ಹಾಕಿ ಸೀಟರ್ ಹತ್ತಿ ಕುಳಿತ ಮೇಲೆಯೇ ಗೊತ್ತಾದದ್ದು ನನ್ನನ್ನು ಇತರ ಮಕ್ಕಳೊಂದಿಗೆ ಸುನ್ನತಿ ಮಾಡಲು ಕರೆದೊಯ್ಯುತ್ತಿದ್ದಾರೆ ಎಂದು. ಒಮ್ಮೆಗೆ ಎದೆ ಧಸ್ಸೆಂದಿತು!

ಸೀಟರ್ ಒಳಗೆ ಒಟ್ಟು ಹತ್ತು ಹದಿನೈದು ಮಕ್ಕಳಿದ್ದರು. ಪಿಕ್‌ನಿಕ್‌ಗೆ ಹೋಗುವಂತೆ ಆಟ ಆಡುತ್ತಾ ಬೊಬ್ಬೆ ಹೊಡೆಯುತ್ತಾ ಹೋದವರು ಹಿಂದಿರುಗಿ ಬರುವಾಗ ಗಾಢ ನಿದ್ದೆಯಲ್ಲಿದ್ದೆವು. ಸುನ್ನತಿ ಮಾಡುವ ಆಸ್ಪತ್ರೆಯ ಮುಂದೆ ಬಸ್ಸು ನಿಂತಾಗ ಎಲ್ಲರ ಎದೆ ಢವಗುಟ್ಟತೊಡಗಿದ್ದಂತೂ ಸುಳ್ಳಲ್ಲ. ಕೆಲವರು ಆಸ್ಪತ್ರೆಯ ಮೆಟ್ಟಿಲು ಹತ್ತಲು ನಿರಾಕರಿಸಿ ಸೀಟರಿನ ಮೆಟ್ಟಿಲಲ್ಲೇ ಹಟ ಹಿಡಿದು ಕುಳಿತಿದ್ದರು. ಅವರನ್ನು ಎಳೆದೊಯ್ಯಲಾಯಿತು. ಆಸ್ಪತ್ರೆಯ ಆವರಣದಲ್ಲಿ ರಚ್ಚೆಯೋ ರಚ್ಚೆ.

ಆದರೆ, ನಮ್ಮ ಭೀತಿಯಂತೆ ಏನೂ ಸಂಭವಿಸಲಿಲ್ಲ. ಅರಿವಳಿಕೆ ಮದ್ದು ನಮಗೆ ಯಾವ ನೋವಿನ ಅನುಭವವನ್ನೂ ನೀಡಿರಲಿಲ್ಲ. ಪ್ಯಾಂಟಿನಲ್ಲಿ ಹೋದವರು ಲುಂಗಿಯಲ್ಲಿ ಹಿಂದಿರುಗಿ ಬಂದಿದ್ದೆವು ಅಷ್ಟೇ. ಆದರೆ, ಒಳಗೆ ಎಂತಹದೋ ವಿಚಿತ್ರ ಕಿರಿಕಿರಿ ಇತ್ತು. ತೊಡೆಯ ನಡುವೆ ಮರಗಟ್ಟಿದ ಅನುಭವ. ಕಾಲುಗಳನ್ನು ಎತ್ತಲೂ ಹಿಂಜರಿಕೆಯಾಗುತ್ತಿತ್ತು. ಹೋಗುವಾಗ ಇದ್ದ ಸಂಭ್ರಮ ಹಿಂದಿರುಗುವಾಗ